ವಿಟ್ಲ ವಿದ್ಯುತ್ ಸಬ್‌ಸ್ಟೇಷನ್ ಕೆಲಸವನ್ನೂ ಆದಷ್ಟು ಬೇಗ ಮುಗಿಸುವ ಬಗ್ಗೆ

ಶ್ರೀ ಎ. ರುಕ್ಕಯ್ಯ ಪೂಜಾರಿ (ವಿಟ್ಲ) : ಮಾನ್ಯ ಉಪಾಧ್ಯಕ್ಷರೇ, ನನ್ನ ವಿಟ್ಲ ವಿಧಾನಸಭಾ ಕ್ಷೇತ್ರದ ವಿಟ್ಲ ವಿದ್ಯುತ್ ಸಬ್‌ಸ್ಟೇಷನ್‌ನ ಕಾಮಗಾರಿ ಕೆಲಸ ಪ್ರಾರಂಭವಾಗಿ ಸುಮಾರು ಮೂರು ವರ್ಷ ಸರಿದರೂ ಕೆಲಸ ಇನ್ನೂ ಕೂಡ ಸಂಪೂರ್ಣವಾಗಿರುವುದಿಲ್ಲ. ಈ ಬಗ್ಗೆ ವಿಧಾನಸಭೆಯಲ್ಲಿ ಎರಡು ಸಲ ಪ್ರಶ್ನೆ ಮಾಡಿದಾಗ ಒಂದು ಸಲ ಮಾರ್ಚ್ 1991ನೇ ವರ್ಷಕ್ಕೆ, ಎರಡನೇ ಪ್ರಶ್ನೆ ಮಾಡಿದಾಗ 1991ನೇ ಡಿಸೆಂಬರ್ 31ಕ್ಕೆ ಕಲಸ ಸಂಪೂರ್ಣವಾಗಿ ಪ್ರಾರಂಭವಾಗುವುದಾಗಿ ಉತ್ತರ ಕೊಟ್ಟಿದ್ದರೂ ಕಾಮಗಾರಿ ಕೆಲಸ ನಿಧಾನವಾಗಿ ಸಾಗುತ್ತಾ ಇದೆ. ಹಾಗೂ ಅದಕ್ಕೆ ಬೇಕಾದ ಸಾಮಗ್ರಿಗಳ ಒದಗಣೆ ಕೂಡ ಆಗಿಲ್ಲ. ಇದರಿಂದ ವಿಟ್ಲದ ಆಸುಪಾಸಿನ ರೈತರು ವಿದ್ಯುತ್ ಕೊರತೆಯಿಂದಾಗಿ ತುಂಬಾ ತೊಂದರೆಯನ್ನು ಅನುಭವಿಸುತ್ತಾ ಇದ್ದಾರೆ. ಹಾಗೂ ಹೊಸ ಸ್ಕೀಮುಗಳ ಕೆಲಸ ಸ್ಥಗಿತಕೊಂಡಿದೆ. ಆದುದರಿಂದ ಸರ್ಕಾರ ಈ ದಿಕ್ಕಿನಲ್ಲಿ ಗಂಭೀರವಾಗಿ ಪರಿಗಣಿಸಿ ವಿಟ್ಲ ವಿದ್ಯುತ್ ಸಬ್ ಸ್ಟೇಷನ್ನಿನ ಕೆಲಸವನ್ನು ಆದಷ್ಟು ಬೇಗ ಮುಗಿಸಬೇಕಾಗಿ ಸರಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) : ಮಾನ್ಯ ಉಪಾಧ್ಯಕ್ಷಣಿಯವರೇ ನನ್ನ ಹೇಳಿಕೆಯನ್ನು ಓದುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದಲ್ಲಿ ಮಂಡಳಿಯು ಒಂದು 100 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ನಿರ್ಮಾಣ ಮಾಡುತ್ತಿದೆ. ಈ ಉಪ ವಿದ್ಯುತ್ ಕೇಂದ್ರ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚ 72.62 ಲಕ್ಷ ರೂಪಾಯಿ. ಈ ಸಾಲಿನ (1992-93)ರ ಆಯವ್ಯಯದಲ್ಲಿ ಈ ಕಾರ್ಯಕ್ಕಾಗಿ 55.0 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಸದರಿ ಉಪ ವಿದ್ಯುತ್ ಕೇಂದ್ರದಲ್ಲಿ 10 ಎಂ.ವಿ.ಎ. ಸಾಮರ್ಥ್ಯವುಳ್ಳ ಒಂದು ಪವರ್ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ಉಪ ವಿದ್ಯುತ್ ಕೇಂದ್ರಕ್ಕೆ ಬೇಕಾಗುವ ಟ್ರಾನ್ಸ್‌ಫಾರ್ಮರ್ ಸ್ವಿಚ್‌ಗೇರ್, ಇತ್ಯಾದಿ ಎಲ್ಲಾ ಉಪಕರಣಗಳನ್ನು ಸರಬರಾಜು ಮಾಡಲಾಗಿದೆ.

ಸದರಿ ಉಪ ವಿದ್ಯುತ್ ಕೇಂದ್ರದ ನಿರ್ಮಾಣದಲ್ಲಿ ಉಂಟಾದ ವಿಳಂಬಕ್ಕೆ ಮುಖ್ಯ ಕಾರ್ಯಗಳು :

1. ಸ್ಥಳವು ಬಹಳ ಗಟ್ಟಿ ಮಣ್ಣಿನಿಂದ ಕೂಡಿದ್ದರಿಂದ, ಸಮತಟ್ಟು ಕಾರ್ಯಕ್ಕೆ ಹೆಚ್ಚು ಸಮಯ ವಿನಿಯೋಗವಾಯಿತು.
2. ಮಳೆಗಾಲದಲ್ಲಿ ನಿರ್ಮಾಣದ ಕಾರ್ಯವು ಕುಂಠಿತಗೊಂಡಿತು.
3. 220ಕೆ.ವಿ.ಡಿ.ಸಿ. ಟವರನ್ನು ಸರಬರಾಜು ಮಾಡುವಲ್ಲಿ ಕೆ.ಇ.ಬಿ. ಕಂಪನಿಯವರು ಮಾಡಿದ ವಿಳಂಬ.

ಈ ಉಪ ವಿದ್ಯುತ್ ಕೇಂದ್ರದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು ಶೇಖಡ 65 ರಷ್ಟು ಕೆಲಸ ಪೂರ್ಣಗೊಂಡಿದೆ. ಮಾರ್ಚ್ 1993ರ ಅಂತ್ಯದ ವೇಳೆಗೆ ಸದರಿ ಉಪ ವಿದ್ಯುತ್ ಕೇಂದ್ರವನ್ನು ಚಾಲನೆ ಗೊಳಿಸಲು ಮಂಡಳಿಯು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.